ಶ್ರೀ ವೆಂಕಟರಾವ್ ನಾಡಗೌಡ : ಸನ್ಮಾನ್ಯ ಅಧ್ಯಕ್ಷರೆ ನಾನೊಂದು ಸೂಚನೆ ಕೊಟ್ಟಿದ್ದೆ ದಯಮಾಡಿ ನನಗೆ ಅವಕಾಶ ಕೊಡಿ.

ಅಧ್ಯಕ್ಷರು : ಪ್ರಶ್ನೋತ್ತರವಾದ ಮೇಲೆ ತೆಗೆದುಕೊಳ್ಳೋಣ.

ಶ್ರೀ ವೆಂಕಟರಾವ್ ನಾಡಗೌಡ: ಪ್ರಶ್ನೋತ್ತರವಾದ ಮೇಲೆ ನನಗೆ ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು : ಈಗ ಪ್ರಶ್ನೋತ್ತರ. ಡಾ:ಹೆಚ್.ಸಿ.ಮಹದೇವಪ್ಪನವರು ತಾವು ಪ್ರಶ್ನೆ ಕೇಳಿ.

1. ಪ್ರಶ್ನೋತ್ತರ

ರಾಜ್ಯದಲ್ಲಿರುವ ಸರ್ಕಾರಿ/ಖಾಸಗಿ ವೈದ್ಯಕೀಯ ಕಾಲೇಜುಗಳು

16 : (94)

ಡಾ : ಮಹದೇವಪ್ಪ. ಹೆಚ್.ಸಿ. (ಟಿ. ನರಸೀಪುರ)

ಅ) ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ಮತ್ತು ಯಾವುವು (ಜಿಲ್ಲಾವಾರು ವಿವರ ನೀಡುವುದು);

ಆ) ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರಗಳನ್ನು ನೀಡುವುದು) ;

ಇ) ಖಾಸಗಿ ಕಾಲೇಜುಗಳಿಗೆ ಸರ್ಕಾರ ಅನುದಾನವನ್ನೇನಾದರೂ ನೀಡುತ್ತಿದೆಯೇ;

ಈ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಅನುದಾನವನ್ನು ನೀಡಲಾಗುತ್ತಿದೆ;

ಉ) ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳು ಸ್ವಂತ ಆಸ್ಪತ್ರೆಗಳನ್ನು ಹೊಂದಿವೆಯೇ; (ವಿವರಗಳನ್ನು ನೀಡುವುದು)

ಊ) ಹಾಗಿದ್ದಲ್ಲಿ, ಈ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೇ;

ಋ) ಹಾಗಿಲ್ಲದಿದ್ದಲ್ಲಿ, ಮೂಲಭೂತ ಸೌಲಭ್ಯಗಳನ್ನು ಒದಗಿಸದೇ ಇರುವ ವೈದ್ಯಕೀಯ ಕಾಲೇಜುಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎ.ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 43 ವೈದ್ಯಕೀಯ ಕಾಲೇಜುಗಳಿದ್ದು, ಅವುಗಳು ಕೆಳಕಂಡಂತಿವೆ:-

ಸರ್ಕಾರಿ ವೈದ್ಯಕೀಯ ಕಾಲೇಜುಗಳು-11
ಖಾಸಗಿ ವೈದ್ಯಕೀಯ ಕಾಲೇಜುಗಳು-23
ಡೀಮ್ಡ್ ವಿಶ್ವವಿದ್ಯಾನಿಲಯಗಳಡಿ ಇರುವ ಖಾಸಗಿ
ವೈದ್ಯಕೀಯ ಕಾಲೇಜುಗಳು-09

ಜಿಲ್ಲಾವಾರು ವಿವರುಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.

ಆ) ಸರ್ಕಾರಿ, ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯದ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಜಿಲ್ಲಾವಾರು ಹಾಗೂ ಕಾಲೇಜುವಾರು ಸಂಖ್ಯೆಯ ಪಟ್ಟಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.

ಇ) ಇಲ್ಲ.

ಈ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಉ) ಭಾರತೀಯ ವೈದ್ಯಕೀಯ ಪರಿಷತ್ತಿನ ಮಾರ್ಗಸೂಚಿಗಳನ್ವಯ ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ನಿಯಮಗಳನ್ವಯ ವೈದ್ಯಕೀಯ ಕಾಲೇಜುಗಳು ಸ್ವಂತ ಆಸ್ಪತ್ರೆಯನ್ನು ಹೊಂದುವುದು ಕಡ್ಡಾಯವಾಗಿದ್ದು, ಅದರಂತೆ, ಎಲ್ಲಾ ವೈದ್ಯಕೀಯ ಕಾಲೇಜುಗಳು ಸ್ವಂತ ಆಸ್ಪತ್ರೆಗಳನ್ನು ಹೊಂದಿರುತ್ತವೆ.

ಊ) ಭಾರತೀಯ ವೈದ್ಯಕೀಯ ಪರಿಷತ್ತಿನ ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ನಿಯಮಗಳನುಸಾರ ಮೂಲಭೂತ ಸೌಲಭ್ಯಗಳು ಇದ್ದರೆ ಮಾತ್ರ ವೈದ್ಯಕೀಯ ಕಾಲೇಜುಗಳನ್ನು ನಡೆಸಲು ಮಾನ್ಯತೆ ನೀಡಲಾಗುವುದು.

ಋ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

KARNATAKA LEGISLATIVE ASSEMBLY

94

Dr. Mahadevappa H.C. (T.Narasipur)

a) What is the number of both Government and Private Medical Colleges in the State and which are there; (Districtwise details be furnished)

b) What is the number of students studying in both Government and Private Medical Colleges; (Districtwise details be furnished)

c) Is Government sanctioning grants to Private Colleges;

d) If so, what is the size of the grants;

e) Whether Government and Private Medical Colleges have their own hospitals; (furnish details)

f) If so, whether basic amenities have been provided in these hospitals;

g) If not, what action has been taken by Government against such of the Medical Colleges which do not possess basic amenities?

S.A. Ramadass (Minister for Medical Education)

a) There are totally 43 Medical Colleges in the State. They are :-

Government Medical Colleges-11

Private Medical Colleges-23

Private Medical Colleges under Deemed Universities-09

Details are furnished in **Annexure-I**

b) The Districtwise and College wise details of number of students studying in both Government and Private Medical Colleges are furnished in **Annexure-2**

c) No.

d) In view of the above answer, this question does not arise.

e) Yes. As per the Rules of both Medical Council of India and Rajiv Gandhi University of Health Sciences it is mandatory to have their own hospitals.

f) As per the Rules of both Medical Council of India and Rajiv Gandhi University of Health Sciences if the hospitals possess basic amenities then only they will be granted recognition.

g) In view of the above answer, this question does not arise.

ಅನುಬಂಧ – 1

ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ವಿದ್ಯಾಲಯಗಳ ಜಿಲ್ಲಾವಾರು ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆ	ಸರ್ಕಾರಿ ಕಾಲೇಜುಗಳು
1	ಬೆಂಗಳೂರು	1. ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ 2. ಇ.ಎಸ್.ಐ.ಪಿ.ಜಿ. ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ಸ್
2	ಬೆಳಗಾಂ	1. ಬೆಳಗಾಂ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ಸ್
3	ಬಳ್ಳಾರಿ	1. ವಿಜಯನಗರ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ಸ್
4	ಬೀದರ್	1. ಬೀದರ್ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ಸ್
5	ಧಾರವಾಡ	1. ಕರ್ನಾಟಕ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ಸ್
6	ಹಾಸನ	1. ಹಾಸನ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ಸ್
7	ಮಂಡ್ಯ	1. ಮಂಡ್ಯ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ಸ್
8	ಮೈಸೂರು	1. ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಸಂಸ್ಥೆ
9	ರಾಯಚೂರು	1. ರಾಯಚೂರು ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ಸ್
10	ಶಿವಮೊಗ್ಗ	1. ಶಿವಮೊಗ್ಗ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ಸ್

ಅನುಬಂಧ–1

ರಾಜ್ಯದಲ್ಲಿರುವ ಖಾಸಗಿ ವೈದ್ಯಕೀಯ ವಿದ್ಯಾಲಯಗಳ ಜಿಲ್ಲಾವಾರು ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆ	ಖಾಸಗಿ ಕಾಲೇಜುಗಳು
1	ಬೆಂಗಳೂರು	1. ಕೆಂಪೇಗೌಡ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ಸ್ 2. ಡಾ.ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ 3. ಎಂ.ಎಸ್.ರಾಮಯ್ಯ ವೈದ್ಯಕೀಯ ಮಹಾವಿದ್ಯಾಲಯ 4. ರಾಜರಾಜೇಶ್ವರಿ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ಸ್ 5. ಸೆಂಟ್‌ಜಾನ್ಸ್ ವೈದ್ಯಕೀಯ ಮಹಾವಿದ್ಯಾಲಯ 6. ವೈದೇಹಿ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ಸ್ 7. ಸಪ್ತಗಿರಿ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ಸ್
2	ಬೆಂಗಳೂರು (ಗ್ರಾಮಾಂತರ)	1. ಎಂ.ವಿ.ಜೆ. ವೈದ್ಯಕೀಯ ಮಹಾವಿದ್ಯಾಲಯ
3	ಬಿಜಾಪುರ	1. ಆಲ್–ಅಮೀನ್ ವೈದ್ಯಕೀಯ ಮಹಾವಿದ್ಯಾಲಯ
4	ಬಾಗಲಕೋಟೆ	1. ಬಿ.ವಿ.ವಿ. ಸಂಘ ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ
5	ಚಿತ್ರದುರ್ಗ	1. ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯ
6	ಧಾರವಾಡ	1. ಎಸ್.ಡಿ.ಎಂ. ವೈದ್ಯಕೀಯ ಮಹಾವಿದ್ಯಾಲಯ
7	ದಾವಣಗೆರೆ	1. ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯ 2. ಎಸ್.ಎಸ್. ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ಸ್

ಕ್ರಮ ಸಂಖ್ಯೆ	ಜಿಲ್ಲೆ	ಖಾಸಗಿ ಕಾಲೇಜುಗಳು
8	ಗುಲ್ಬರ್ಗಾ	1. ಎಂ.ಆರ್. ವೈದ್ಯಕೀಯ ಮಹಾವಿದ್ಯಾಲಯ 2. ಖಾಜಬಂಧನವಾಜ್ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್
9	ಮಂಗಳೂರು	1. ಎ.ಜೆ. ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ 2. ಫಾದರ್ ಮುಲರ್ ವೈದ್ಯಕೀಯ ಮಹಾವಿದ್ಯಾಲಯ 3. ಶ್ರೀನಿವಾಸ ವೈದ್ಯಕೀಯ ಮಹಾವಿದ್ಯಾಲಯ
10	ಮಂಡ್ಯ	1. ಆಗಿಚುಂಚನಗಿರಿ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್
11	ರಾಯಚೂರು	1. ನವೋದಯ ವೈದ್ಯಕೀಯ ಮಹಾವಿದ್ಯಾಲಯ
12	ದಕ್ಷಿಣ ಕನ್ನಡ ಜಿಲ್ಲೆ	1. ಕೆ.ವಿ.ಜಿ. ವೈದ್ಯಕೀಯ ಮಹಾವಿದ್ಯಾಲಯ
13	ಶಿವಮೊಗ್ಗ	1. ಸುಬ್ಬಯ್ಯ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್

ಅನುಬಂಧ – 1

ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ

ಜಿಲ್ಲಾವಾರು ವಿವರ

ಕ್ರಮ ಸಂಖ್ಯೆ	ವಿಶ್ವವಿದ್ಯಾಲಯದ ಹೆಸರು	ಪ್ರವೇಶಮಿತಿ
1	ಜೆ.ಎನ್. ವೈದ್ಯಕೀಯ ಕಾಲೇಜು, ಬೆಳಗಾಂ	200
2	ಶ್ರೀ. ದೇವರಾಜ ಅರಸ್ ಮೆಡಿಕಲ್ ಕಾಲೇಜು, ಕೋಲಾರ	150
3	ಜೆ.ಎಸ್.ಎಸ್. ವೈದ್ಯಕೀಯ ಕಾಲೇಜು, ಮೈಸೂರು	150
4	ಸಿದ್ಧಾರ್ಥ ವೈದ್ಯಕೀಯ ಕಾಲೇಜು, ತುಮಕೂರು	150
5	ಬಿ.ಎಲ್.ಡಿ.ಇ.ಎ.ಎಸ್. ಬಿ.ಎಂ.ಪಾಟೀಲ್ ವೈದ್ಯಕೀಯ ಕಾಲೇಜು, ಬಿಜಾಪುರ	150
6	ಕೆ.ಎಸ್.ಹೆಗ್ಡೆ ಮೆಡಿಕಲ್ ಅಕಾಡೆಮಿ, ಮಂಗಳೂರು.	150
7	ಯೆನೇಪೋಯಾ ಮೆಡಿಕಲ್ ಕಾಲೇಜು, ಮಂಗಳೂರು.	150
8	ಕಸ್ತೂರ ಬಾ ಮೆಡಿಕಲ್ ಕಾಲೇಜು, ಮಂಗಳೂರು.	250
9	ಕಸ್ತೂರ ಬಾ ಮೆಡಿಕಲ್ ಕಾಲೇಜು, ಮಣಿಪಾಲ.	250
	ಒಟ್ಟು	**1600**

ಅನುಬಂಧ – 2

ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಜಿಲ್ಲಾವಾರು ವಿವರ

ಕ್ರಮ ಸಂಖ್ಯೆ	ಜಿಲ್ಲೆ	ಸರ್ಕಾರಿ ವೈದ್ಯಕೀಯ ಕಾಲೇಜುಗಳು	2008–09 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2009–10 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2010–11 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2011–12 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2012–13 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ
1	ಬೆಂಗಳೂರು	1. ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ	150	150	150	250	249	949
		2. ಇ.ಎಸ್.ಐ.ಪಿ.ಜಿ. ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್	–	–	–	–	100	100
2	ಬೆಳಗಾಂ	1. ಬೆಳಗಾಂ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್	100	100	100	100	100	500
3	ಬಳ್ಳಾರಿ	1. ವಿಜಯನಗರ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್	99	100	100	100	100	499
4	ಹಾಸನ	1. ಹಾಸನ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್	100	100	99	100	100	499
5	ಮಂಡ್ಯ	1. ಮಂಡ್ಯ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್	99	100	100	98	99	496

ಕ್ರಮ ಸಂಖ್ಯೆ	ಜಿಲ್ಲೆ	ಸರ್ಕಾರಿ ವೈದ್ಯಕೀಯ ಕಾಲೇಜುಗಳು	2008–09 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2009–10 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2010–11 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2011–12 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2012–13 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ
6	ಮೈಸೂರು	1. ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಸಂಸ್ಥೆ	100	100	100	150	150	600
7	ಧಾರವಾಡ	1. ಕರ್ನಾಟಕ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ಸ್	100	150	150	150	149	699
8	ಶಿವಮೊಗ್ಗ	1. ಶಿವಮೊಗ್ಗ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ಸ್	100	100	100	100	100	500
9	ಬೀದರ್	1. ಬೀದರ್ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ಸ್	100	100	100	100	99	499
10	ರಾಯಚೂರು	1. ರಾಯಚೂರು ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ಸ್	99	100	100	100	100	499
ಒಟ್ಟು								**5840**

ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಜಿಲ್ಲಾವಾರು ವಿವರ

ಕ್ರಮ ಸಂಖ್ಯೆ	ಜಿಲ್ಲೆ	ಖಾಸಗಿ ವೈದ್ಯಕೀಯ ಕಾಲೇಜುಗಳು	2008-09 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2009-10 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2010-11 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2011-12 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2012-13 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ
1	ಬೆಂಗಳೂರು	1. ಡಾ.ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ	99	100	100	100	100	499
		2. ಕೆಂಪೇಗೌಡ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್	121	119	120	100	150	610
		3. ಎಂ.ಎಸ್.ರಾಮಯ್ಯ ವೈದ್ಯಕೀಯ ಮಹಾವಿದ್ಯಾಲಯ	150	150	150	150	150	750
		4. ರಾಜರಾಜೇಶ್ವರಿ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್	100	100	100	150	150	600
		5. ಸೆಂಟ್‌ಜಾನ್ಸ್ ವೈದ್ಯಕೀಯ ಮಹಾವಿದ್ಯಾಲಯ	60	60	60	60	60	300
		6. ವೈದೇಹಿ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್	150	150	150	150	150	750
		7. ಸಪ್ತಗಿರಿ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್	–	–	–	150	150	300
2	ಬೆಂಗಳೂರು (ಗ್ರಾ)	1. ಎಂ.ಎ.ಜೆ. ವೈದ್ಯಕೀಯ ಮಹಾವಿದ್ಯಾಲಯ	99	99	100	150	100	548
3	ಬಾಗಲಕೋಟೆ	1. ಬಿ.ಎಂ.ಪಿ. ಸಂಘ ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ	100	100	100	150	148	598

ಕ್ರಮ ಸಂಖ್ಯೆ	ಜಿಲ್ಲೆ	ಖಾಸಗಿ ವೈದ್ಯಕೀಯ ಕಾಲೇಜುಗಳು	2008–09 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2009–10 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2010–11 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2011–12 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2012–13 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ
4	ಮಂಡ್ಯ	1. ಆದಿಚುಂಚನಗಿರಿ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್	100	100	100	100	100	500
5	ಮಂಗಳೂರು	1. ಎ.ಜೆ. ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್	100	100	99	150	150	599
		2. ಫಾದರ್ ಮುಲರ್ ವೈದ್ಯಕೀಯ ಮಹಾವಿದ್ಯಾಲಯ	100	100	100	100	150	550
		3. ಶ್ರೀನಿವಾಸ ವೈದ್ಯಕೀಯ ಮಹಾವಿದ್ಯಾಲಯ	–	–	–	150	150	300
		4. ಕೆ.ಎಸ್.ಹೆಗಡೆ ವೈದ್ಯಕೀಯ ಮಹಾವಿದ್ಯಾಲಯ	100	–	–	–	–	100
		5. ಯೇನಪೋಯ ವೈದ್ಯಕೀಯ ಮಹಾವಿದ್ಯಾಲಯ	100	–	–	–	–	100
6	ಧಾರವಾಡ	1. ಎಸ್.ಡಿ.ಎಂ. ವೈದ್ಯಕೀಯ ಮಹಾವಿದ್ಯಾಲಯ	100	100	100	100	100	500
7	ರಾಯಚೂರು	1. ನವೋದಯ ವೈದ್ಯಕೀಯ ಮಹಾವಿದ್ಯಾಲಯ	100	100	100	100	149	549
8	ಬಿಜಾಪುರ	1. ಆಲ್–ಅಮೀನ್ ವೈದ್ಯಕೀಯ ಮಹಾವಿದ್ಯಾಲಯ	100	100	100	100	100	500
9	ಚಿತ್ರದುರ್ಗ	1. ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯ	100	98	100	100	100	498

ಕ್ರಮ ಸಂಖ್ಯೆ	ಜಿಲ್ಲೆ	ಖಾಸಗಿ ವೈದ್ಯಕೀಯ ಕಾಲೇಜುಗಳು	2008–09 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2009–10 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2010–11 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2011–12 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	2012–13 ರಲ್ಲಿ ಪ್ರವೇಶ ಗೊಂಡ ವಿದ್ಯಾರ್ಥಿಗಳ ಸಂಖ್ಯೆ	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ
10	ದಾವಣಗೆರೆ	1. ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯ	245	245	245	242	244	1221
		2. ಎಸ್.ಎಸ್. ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್	150	150	150	150	150	750
11	ಗುಲ್ಬರ್ಗಾ	1. ಖಾಜಬಂದನವಾಜ್ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್	100	100	100	100	100	500
		2. ಎಂ.ಆರ್. ವೈದ್ಯಕೀಯ ಮಹಾವಿದ್ಯಾಲಯ	150	150	150	148	150	748
12	ದಕ್ಷಿಣ ಕನ್ನಡ ಜಿಲ್ಲೆ	1. ಕೆ.ವಿ.ಜಿ. ವೈದ್ಯಕೀಯ ಮಹಾವಿದ್ಯಾಲಯ	100	100	99	97	100	496
13	ಶಿವಮೊಗ್ಗ	1. ಸುಬ್ಬಯ್ಯ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್	–	–	–	–	150	150
ಒಟ್ಟು								12816

ಡಾ : ಹೆಚ್. ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ವಿವರವಾದ ಉತ್ತರ ಕೊಟ್ಟಿದ್ದಾರೆ. ಆದರೆ, ಲಭ್ಯವಾಗಿರುವ ಉತ್ತರದ ಪ್ರಕಾರ ಸುಮಾರು 43 ಮೆಡಿಕಲ್ ಕಾಲೇಜ್‌ಗಳು ಖಾಸಗಿ ಮತ್ತು ಸರ್ಕಾರಿ ಹಾಗೂ ಡೀಮ್ಡ್ ಯೂನಿವರ್ಸಿಟಿ ಕೆಳಗಡೆ ಕೆಲಸ ಮಾಡುತ್ತಿವೆ. ಇದರಲ್ಲಿ ಖಾಸಗಿ ಮತ್ತು ಸರ್ಕಾರಿ ಕಾಲೇಜ್‌ಗಳಲ್ಲಿ 5,848 ವಿದ್ಯಾರ್ಥಿಗಳು, 9 ಡೀಮ್ಡ್ ಯೂನಿವರ್ಸಿಟಿಯಲ್ಲಿ 1,600 ವಿದ್ಯಾರ್ಥಿಗಳು ಓದುತ್ತಿದ್ದಾರೆ.

ಇವರಿಗೆ ಬೇಕಾಗಿರತಕ್ಕ ಆಸ್ಪತ್ರೆಯ ಸೌಲಭ್ಯವನ್ನು ಸಂಪೂರ್ಣವಾಗಿ ಪಡೆದುಕೊಳ್ಳುವುದಕ್ಕೆ ಇವರಿಗೆ ಆಗಿಲ್ಲ. ಜೊತೆಗೆ ಇವತ್ತಿನ ದಿವಸ ಸಿಬ್ಬಂದಿಗಳಿಲ್ಲ. Indian Medical Councilನ recommendation ಪ್ರಕಾರ bed strength and Doctor ratio ಮತ್ತು nurses and bed strength ratio ವನ್ನು maintain ಮಾಡುವುದಕ್ಕೆ ಆಗಿಲ್ಲ. ಒಂದೊಂದು ಕಡೆ 200 ಬೆಡ್‌ಗಳ ಒಂದು ಆಸ್ಪತ್ರೆ ಇದ್ದರೆ 10–15 ಜನ ನರ್ಸ್‌ಗಳನ್ನೇ ಮ್ಯಾನೇಜ್ ಮಾಡುತ್ತಿದ್ದಾರೆ. ನಮ್ಮ ಮೈಸೂರಿನಲ್ಲಿರುವ ಸರ್ಕಾರಿ ಆಸ್ಪತ್ರೆಯ Stone Ward ನಲ್ಲಿ ತಾವು ಇದನ್ನು ನೋಡಬಹುದು. ನಾನು ಒಂದು ಆಸ್ಪತ್ರೆಗೆ ಹೋಗಿದ್ದಾಗ entire stone building ನಲ್ಲಿ ಒಬ್ಬರೇ ಒಬ್ಬರು Staff Nurse ಓಡಾಡುತ್ತಿದ್ದರು. ನನ್ನ ಸಂಬಂಧಿಕರೊಬ್ಬರು ಹುಷಾರು ಇಲ್ಲದೇ ಅವರಿಗೆ ಟ್ರೀಟ್‌ಮೆಂಟ್ ಕೊಡಿಸುವುದಕ್ಕಾಗಿ ಬ್ಲಡ್ ಬೇಕಾಗಿತ್ತು. ಅಲ್ಲಿದ್ದ ಒಬ್ಬರೇ ನರ್ಸ್ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಓಡಾಡಿ ಕೆಲಸ ಮಾಡುತ್ತಾ ಕೊನೆಗೆ ಅವರು ಬಿದ್ದು ಹೋದರು. ಆಸ್ಪತ್ರೆ ಕಾಲೇಜುಗಳಲ್ಲಿ ಇರತಕ್ಕಂಥ ವಿದ್ಯಾರ್ಥಿಗಳಿಗೆ infrastructure ಅನ್ನು ಕೊಡದೇ ಹೋದರೆ ಮತ್ತು ಆಯಾಯ subject ಗೆ involve ಆಗಿರುವ ಉಪಾಧ್ಯಾಯರನ್ನು ನೇಮಕ ಮಾಡದೇ ಹೋದರೆ ಹಾಗೂ ಅಲ್ಲಿಗೆ ಬೇಕಾಗಿರುವ ಪ್ಯಾರಾ ಮೆಡಿಕಲ್ ಸಿಬ್ಬಂದಿಗಳು ಇಲ್ಲದೇ ಹೋದರೆ ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು ಡಾಕ್ಟರ್ ಆಗಿ ಹೊರಕ್ಕೆ ಬರುವಾಗ ಅವರ quality suffer ಆಗುತ್ತದೆ. ನಿನ್ನೆ ದಿವಸ ಒಂದು ಪತ್ರಿಕೆಯಲ್ಲಿ ಎಲ್ಲರೂ ಓದಿರಬಹುದು. ಅದೇನೆಂದರೆ, ಮೂರು ವರ್ಷದ ಒಂದು ಮಗು ಹಲ್ಲಿನ ಸಮಸ್ಯೆಗೆ ಆಸ್ಪತ್ರೆಗೆ ಹೋಗಿದ್ದಾಗ ಆ ಮಗುವಿಗೆ ಟ್ರೀಟ್‌ಮೆಂಟ್‌ಗೋಸ್ಕರ ಡಾಕ್ಟರ್‌ರವರು ಪ್ರಜ್ಞೆ ತಪ್ಪಿಸುವುದಕ್ಕಾಗಿ ಎಷ್ಟು ಪ್ರಮಾಣದಲ್ಲಿ anaesthesia ಕೊಡಬೇಕಾಗಿತ್ತೋ

ಅದಕ್ಕಿಂತ excess ಕೊಟ್ಟಿದ್ದರಿಂದ ಆ ಮಗು ಪ್ರಾಣವನ್ನೇ ಕಳೆದುಕೊಂಡಿತು. ಇವತ್ತಿನ ದಿವಸ ಸರಿಯಾದಂಥ ಸಿಬ್ಬಂದಿಯ ಜೊತೆಗೆ ತರಬೇತಿಯನ್ನು ಮತ್ತು ಉಪನ್ಯಾಸವನ್ನು ಹಾಗೂ ಅವರಿಗೆ ಬೇಕಾಗಿರುವ ಮಾಹಿತಿಯನ್ನು ಕೊಡದೇ ಹೋದರೆ ಮನುಷ್ಯರ ಜೀವದ ಜೊತೆ ಆಟವಾಡಿದಂತೆ ಆಗುತ್ತದೆ. ನಿನ್ನೆ ದಿವಸ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಇದು ಆರೋಗ್ಯ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ ಎಂದು ಹೇಳಿದ್ದೀರಿ. ಈ ಪ್ರಶ್ನೆಗೆ ಆನಂತರ ಉತ್ತರ ಕೊಡಿ. ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಆರೋಗ್ಯ ಇಲಾಖೆಗೆ ಸೇರಿರುವಂತಹ ಆಸ್ಪತ್ರೆಗಳನ್ನು ವಿಭಜನೆ ಮಾಡಿ ಎಂದು ಈಗಾಗಲೇ strike ನಡೆಯುತ್ತಿದೆ. Medical Education is different and Health sector is different. ಇದು teaching ನಲ್ಲಿದೆ. ಮತ್ತೆ health ನಲ್ಲಿರುವುದು referral hospital ಆಗಿದೆ. ಅಂದರೆ Primary, Sub Divisional, Taluk and District Level. It is for referral system in the health sector. It is for teaching purposes. Teaching purposes and Super Specialization Hospitals, they should be totally separate from the Health sector. ಈ ತರಹ ಒಂದು confusion ಆಗಿ ವೈದ್ಯರು ಮತ್ತು ವೈದ್ಯಕೀಯೇತರ ಸಿಬ್ಬಂದಿಗಳು ಗೊಂದಲ ಮಾಡಿಕೊಂಡಿದ್ದಾರೆ. ಸುಮಾರು ವರ್ಷಗಳಿಂದ autonomous ನಲ್ಲಿ contract basis ಮೇಲೆ ಇರುವ ನರ್ಸ್‌ಸ್ ನಮಗೆ ಸಂಬಳ ಕೊಡಿ ಮತ್ತು ನಮ್ಮನ್ನು confirm ಮಾಡಿ ಎಂದು ಕೇಳುತ್ತಿದ್ದಾರೆ. ಇದಕ್ಕೆ recruitment rules and roster ನಲ್ಲಿ ಅವಕಾಶ ಇಲ್ಲದಿದ್ದರೂ ಸಹ recruitment ಮಾಡುವಾಗ ಅವರಿಗೆ ಆದ್ಯತೆ ಕೊಡಬೇಕಾಗುತ್ತದೆ. ಏಕೆಂದರೆ, ಅವರು ಸುಮಾರು ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ. ವೈದ್ಯಕೀಯ ಕಾಲೇಜುಗಳನ್ನು ಮಾಡಲಾಗಿದೆ. ಆದರೆ, ಅದಕ್ಕೆ ಬೇಕಾಗಿರುವ ಸಿಬ್ಬಂದಿಗಳಿಲ್ಲ. Indian Medical Council ನವರು ಬರುತ್ತಿದ್ದಾರೆಂದರೆ ಹೊಸ ಹೊಸ ಬಟ್ಟೆಗಳನ್ನು ತಂದು ಖಾಸಗಿಯವರೂ ಆಸ್ಪತ್ರೆಗಳನ್ನು ಮಾಡುತ್ತಾರೆ. ಹಾಗೆಯೇ ಚೆನ್ನಾಗಿರುವ ಜನರನ್ನು ಕರೆದುಕೊಂಡು ಹೋಗಿ ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಿಕೊಂಡು patient ಇದ್ದಾರೆಂದು ಅವರಿಗೆ

satisfy ಮಾಡಿ they try to run the Institution. ಇದೆಲ್ಲ ultimately, the worst victims will be people.

ಅಧ್ಯಕ್ಷರು :– ಮಾನ್ಯ ಸಚಿವರು ಮೊದಲು ಉತ್ತರ ಹೇಳಲಿ.

ಡಾ:ಹೆಚ್.ಸಿ ಮಹದೇವಪ್ಪ : ಆಯಿತು. ಡೀಟೇಲ್ ಆಗಿ ಹೇಳುವುದಕ್ಕೆ ಹೋಗುವುದಿಲ್ಲ. Since it is very very vital, ಇದನ್ನು ಸರ್ಕಾರ ಸೀರಿಯಸ್ ಆಗಿ ಮನಗೊಂಡು ಸಿಬ್ಬಂದಿಗಳನ್ನು ನೇಮಕ ಮಾಡಬೇಕಾಗುತ್ತದೆ. ಈಗ CET ರದ್ದು ಮಾಡಿದ ಮೇಲೆ ಖಾಸಗಿಯವರಿಗೆ 50% ನೀಡುವ ಬಗ್ಗೆ ಸುಪ್ರೀಂ ಕೋರ್ಟ್ ಆದೇಶದ ಮೇಲೆ ನಾನು ಹಿಂದೆಯೇ ಪ್ರಸ್ತಾಪ ಮಾಡಿದ್ದೇನೆ. ಇಲ್ಲಿ ಮೀಸಲಾತಿಗಳಲ್ಲಿ ಆಯ್ಕೆ ಆಗಿರುವಂತಹ ವಿದ್ಯಾರ್ಥಿಗಳಿಗೆ ಸರ್ಕಾರವೇ ನೇರವಾಗಿ fees ಅನ್ನು ತುಂಬಿಕೊಡಬೇಕೆಂಬುದು ಮತ್ತು recruitment ಮಾಡುವಾಗ ಮೆರಿಟ್ ಆಧಾರದ ಮೇಲೆ select ಆದವರನ್ನು reserved category ಯಲ್ಲಿ ಸೇರಿಸಬೇಕು. Reserved seat ಬಗ್ಗೆ ಇಡೀ ಸದನ ಒಕ್ಕೊರಲಿನ ಅಭಿಪ್ರಾಯವನ್ನು ಸರ್ವಾನುಮತದಿಂದ ಇಲ್ಲಿ ಅಂಗೀಕಾರ ಮಾಡಿದ್ದೇವೆ. ಇದನ್ನು ಮಾಡಿ ನಾವು ಅವರಿಗೆ ಕೊಡದಿದ್ದರೆ, it speaks a different tongue.

ಶ್ರೀ ಎಸ್.ಎ.ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂಥ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿದ್ದೇವೆ. ಅದರಲ್ಲಿ ಅವರು ಪ್ರಮುಖವಾದಂಥ ಒಂದು ವಿಚಾರವನ್ನು ಕೇಳಿದ್ದಾರೆ. ಅದೇನೆಂದರೆ, ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳು ಸ್ವಂತ ಆಸ್ಪತ್ರೆಯನ್ನು ಹೊಂದಿವೆಯೇ ಎಂದು ಕೇಳಿದ್ದಾರೆ. ಹೌದು ಎಂದು ನಾನು ಉತ್ತರ ಕೊಟ್ಟಿದ್ದೇನೆ. ಮೊದಲು ಇದ್ದಂಥದು ನಿಜ. ಅಂದರೆ, ಮೂರು ವರ್ಷಗಳ ಹಿಂದೆ ಬೇರೆ ಬೇರೆ ಸರ್ಕಾರಿ ಆಸ್ಪತ್ರೆಗಳನ್ನು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು attachment ಮಾಡಿಕೊಂಡು ಇದ್ದಂಥ ಮೆಡಿಕಲ್ ಕಾಲೇಜುಗಳಿದ್ದವು. ಆದರೆ, ಮೂರು ವರ್ಷಗಳಿಂದ ಅವರಿಗೆ ನಿರಂತರವಾಗಿ ಮಾಡಿದ ಮೇಲೆ ಕಳೆದ ಎರಡು ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿರುವ 43 ವೈದ್ಯಕೀಯ ಕಾಲೇಜುಗಳೂ ಕೂಡ ಸ್ವಂತ ಆಸ್ಪತ್ರೆಗಳನ್ನು ಹೊಂದಿದೆ. ಈಗ ಅವುಗಳಿಗೆ ಸಂಬಂಧಪಟ್ಟಂಥದ್ದೆಲ್ಲವನ್ನೂ fulfil ಮಾಡುವಂಥ ಕೆಲಸವನ್ನು ಮಾಡಿದ್ದೇವೆ. ಹಿಂದಿನ ವರ್ಷದಲ್ಲಿ ಆಸ್ಪತ್ರೆ

ಇಲ್ಲವೆಂಬ ಕಾರಣಕ್ಕಾಗಿಯೇ ಕಾಲೇಜಿಗೆ ಕೊಟ್ಟಂಥ ಅಡ್ಮಿಷನ್ ಸಹ cancel ಮಾಡಿದ್ದೇವೆ. ಈಗ undertaking ಕೊಟ್ಟು ಎಲ್ಲಾ ಕಾಲೇಜಿನವರು ಸಂಪೂರ್ಣವಾಗಿ ಆಸ್ಪತ್ರೆಯನ್ನು ಹೊಂದಿದ್ದಾರೆಂಬುದು ಮೊದಲನೆ ವಿಷಯ. ಎರಡನೆ ವಿಷಯ ಏನೆಂದರೆ, ಆಸ್ಪತ್ರೆಯಲ್ಲಿನ ಮೂಲಭೂತ ಸೌಕರ್ಯಗಳ ಬಗ್ಗೆ ವಿಚಾರ ಪ್ರಸ್ತಾಪ ಮಾಡಿದ್ದೀರಿ. ತಾವು ಸರ್ಕಾರಿ ಆಸ್ಪತ್ರೆಯ ಬಗ್ಗೆ ತಾವು ಹೇಳಿರುವುದು ನಿಜವಾಗಿದೆ. ಅಂದರೆ, deformities ಇದ್ದದು ನಿಜ. Teachers faculties ಇಲ್ಲದೇ ಇರುವುದು ನಿಜ. ಆದರೆ, ಈಗ ನಮಗೆ ಇರತಕ್ಕಂಥ intake ಏನೇನಿದೆ, ಅದನ್ನು MCI Normsನ ಆಧಾರದ ಮೇಲೆ ಎಲ್ಲವನ್ನೂ recruitment ಮಾಡಿದ್ದೇವೆ. ಇದಕ್ಕೆ ಹಣಕಾಸಿನ ಇಲಾಖೆ ಕೂಡ ನಮಗೆ ಪರ್ಮಿಷನ್ ಕೊಟ್ಟಿದ್ದರು. ಹಾಗೆಯೇ ಎಲ್ಲವನ್ನೂ ಸಹ walk-in-interview ಮೂಲಕವೇ fulfil ಮಾಡುವಂಥದನ್ನು ಮಾಡಿದ್ದೇವೆ. Teaching facultyನಲ್ಲಿ ಯಾವುದೂ problem ಇರಲಿಲ್ಲ. ಆದರೆ, Nursing Staff ಮತ್ತು Para Medical ಬಗ್ಗೆ ತಾವು ಏನು ಹೇಳಿದ್ದೀರಿ, ಅದರಲ್ಲಿ sanctioned posts ಇದ್ದರೂ ಕೂಡ recruitment ಮಾಡುವುದಕ್ಕೆ ಆರ್ಥಿಕ ಇಲಾಖೆಯಿಂದ ಎಲ್ಲೋ ಒಂದು ಕಡೆ restrictions ಇತ್ತು. ಆದ್ದರಿಂದ ಕೆಲವು ಕಡೆ outsource ಮೂಲಕ ತೆಗೆದುಕೊಂಡಿದ್ದೇವೆ. ಕೇಂದ್ರ ಸರ್ಕಾರ ಕಳೆದ ಸಾಲಿನಲ್ಲಿ relaxation ಅನ್ನು ಕೊಟ್ಟಿದೆ. ಮೊದಲು ಎಷ್ಟು ಬೆಡ್‌ಗೆ ಎಷ್ಟು ನರ್ಸ್‌ಸ್ ಬೇಕೆಂದು ಹೇಳಲಾಗಿತ್ತೋ ಅದಕ್ಕೆ relaxation ಕೊಡುವುದಂಥದು ಮತ್ತು teaching faculty ಯಲ್ಲಿ relaxation ಅನ್ನು ಕೊಟ್ಟಿರುವುದರಿಂದ ಕೇಂದ್ರ ಸರ್ಕಾರ ಮತ್ತು MCIನ ರೂಲಿನ ಪ್ರಕಾರ ನಮಗೆ ಇರುವ intakeಗೆ PG ಮತ್ತು UG ಗೆ ಎಷ್ಟು ಬೇಕಾಗಿತ್ತೋ ಅಷ್ಟನ್ನೂ recruitment ಮಾಡಿದ್ದೇವೆ. ಹಾಗೆಯೇ autonomous institution ಗಳಿಗೆ ಅಲ್ಲಲ್ಲಿಯೇ ಅವಕಾಶ ಮಾಡಿಕೊಟ್ಟಿದ್ದರಿಂದ ಯಾವುದೇ deformity ಇಲ್ಲ. ಇಲ್ಲ ಎಂದು ಹೇಳುವುದಕ್ಕೆ ನನಗೆ ಯಾವರೀತಿಯ ಸಂತೋಷ ಬರುತ್ತದೆ ಎಂದರೆ MCI ಕಳೆದ ವರ್ಷದಲ್ಲಿ ಎರಡು ಆಸ್ಪತ್ರೆಗಳಿಗೆ ಒಂದು ಸಾರಿ surprise visits ಅನ್ನು ಮಾಡಿದ್ದರು. ಎರಡು ಕಾಲೇಜುಗಳಲ್ಲಿದ್ದಂಥ deformity ಬಗ್ಗೆ ನಮ್ಮ Chief Secretary ಗೆ ಪತ್ರ ಬರೆದಿದ್ದರು. ಈಗ ಅದನ್ನೂ

ಸಹ fulfil ಮಾಡಿದ್ದೇವೆ. ಹಾಗಾಗಿ ನಮಗೆ permanent affiliations ಅನ್ನು ಎಲ್ಲಾ ಆಸ್ಪತ್ರೆಗಳಿಗೆ ಕೊಟ್ಟಿದ್ದಾರೆ. ಎರಡು ಖಾಸಗಿ ಆಸ್ಪತ್ರೆಗಳಲ್ಲಿ

ಸಮಸ್ಯೆ ಇತ್ತು. ಸ್ವತ: ಅಲ್ಲಿಗೆ ಭೇಟಿ ಮಾಡಿದ್ದೇನೆ. ಅದಕ್ಕೆ ಸಂಬಂಧಪಟ್ಟಂತೆ ಒಂದು ನೋಟೀಸ್ ಅನ್ನು ಸಹ ಕೊಟ್ಟಿದ್ದೇವೆ. ನಾನು ಅಲ್ಲಿಗೆ ಹೋದಂಥ ಸಂದರ್ಭದಲ್ಲಿ ಎಷ್ಟು patients ಇರಬೇಕಾಗಿತ್ತೋ ಅಷ್ಟು patients ಅಲ್ಲಿ ಇರಲಿಲ್ಲ. MCIನವರು ಬಂದಾಗ ಬೇರೆ patients ಅನ್ನು ತಂದು ಮಲಗಿಸುತ್ತಾರೆಂದು ತಾವು ಹೇಳಿದ್ದೀರಿ, ಇದು ನಿಜ. ಈ ರೀತಿ ಮಾಡುತ್ತಿದ್ದಾರೆಂಬ ವಿಚಾರ ನನ್ನ ಗಮನಕ್ಕೆ ಬಂದಾಗ ನಾನೇ surprise visit ಅನ್ನೂ ಸಹ ಮಾಡಿದ್ದೇನೆ. ಆ ಎರಡು ಆಸ್ಪತ್ರೆ ಬಿಟ್ಟರೆ ಬಹುತೇಕ 43 ಆಸ್ಪತ್ರೆಗಳಲ್ಲಿ ಬೇಕಾಗಿರುವಂಥ ಎಲ್ಲಾ ಸಿಬ್ಬಂದಿಗಳೂ ಮತ್ತು ಅದರ ವ್ಯವಸ್ಥೆಯನ್ನು ಜೋಡಿಸಿದ್ದೇವೆ. MCIನವರು ಬಂದಾಗ faculty ಗಳನ್ನು ತೋರಿಸುತ್ತಾರೆಂಬ ಒಂದು ವಿಚಾರವನ್ನು ತಾವು ಹೇಳಿದ್ದೀರಿ ಆ ದೃಷ್ಟಿಯಿಂದ ನಾವು ಕಳೆದ ಸಾಲಿನಿಂದ ಏನು ಮಾಡಿದ್ದೇವೆಂದರೆ; ಯಾರು faculty ಗಳನ್ನು list ಮಾಡಿ ಹಾಕಿರುತ್ತಾರೆಯೋ ಅದನ್ನು website ನಲ್ಲಿ ಹಾಕಿದ್ದೇವೆ. ಜೊತೆಗೆ ಯಾರ್ಯಾರು ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದಾರೆಂಬುದನ್ನೂ ಸಹ ಹೇಳಿದ್ದೇವೆ. ಎಲ್ಲಿಯೂ ಸಹ duplication ಇಲ್ಲದಂತೆ ಮಾಡಿದ್ದೇವೆ. ಇದಲ್ಲದೇ ಒಂದು ಕಾಲೇಜಿನಲ್ಲಿರುವವರು ಏನು income declaration ಮಾಡಿರುವುದನ್ನು mandatory ಮಾಡಿ ಆತ ಇನ್ನೊಂದು ಕಡೆ ಕೆಲಸ ಮಾಡುವುದಕ್ಕೆ provision ಇಲ್ಲದಂಥ ರೀತಿಯಲ್ಲಿ ಮಾಡುವಂಥದನ್ನು ಮಾಡಿದ್ದೇವೆ. ಏಕೆಂದರೆ, ಈಗ MCI Scale ಅನ್ನು ಕೊಡುವುದರಿಂದ ಈಗ ನಮಗೆ ಎಲ್ಲಿಯೂ ಕೂಡ Doctors, Assistant Professors and Professorಗಳ ಕೊರತೆ ಇಲ್ಲದ ರೀತಿಯಲ್ಲಿ ಅದನ್ನು ಮ್ಯಾನೇಜ್ ಮಾಡುವಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ.

ಡಾ : ಹೆಚ್.ಸಿ.ಮಹದೇವಪ್ಪ :– ಮಾನ್ಯ ಅಧ್ಯಕ್ಷರೆ, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಓಡಾಡಿಕೊಂಡು ಆಸ್ಪತ್ರೆಗಳಿಗೆ ಭೇಟಿ ನೀಡಿ ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ನನ್ನ ಪ್ರಕಾರ Government of India ದ MCIನ recommendation ಪ್ರಕಾರ bed and nurses ratio ಇಲ್ಲ. ಆಸ್ಪತ್ರೆವಾರು ಅಲ್ಲಿ ಎಷ್ಟು strength ಇದೆ ಎಂಬುದನ್ನು ಅವರು ಇನ್ನೊಂದು ಸಾರಿ ಕೂಲಂಕುಷವಾಗಿ

ಪರಿಶೀಲನೆ ಮಾಡಬೇಕು. ಖಂಡಿತ ಆ ರೀತಿಯಾಗಿಲ್ಲ, because nursing care is very very important in any hospital. ಮತ್ತೆ ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ವೈದ್ಯರು ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವ ಅರೆವೈದ್ಯ ಸಿಬ್ಬಂದಿಗಳಲ್ಲಿರುವ ಗೊಂದಲವನ್ನು ನಿವಾರಣೆ ಮಾಡಬೇಕು. ಈಗ ಸರ್ಕಾರ ಉಪ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿ ಮಾಡಿದ್ದೀರಿ. ಈಗ ಅವರು strike ಮಾಡುತ್ತಿದ್ದಾರೆ. ಪದೇ ಪದೇ ವೈದ್ಯರು ಮತ್ತು ಅರೆವೈದ್ಯ ಸಿಬ್ಬಂದಿಗಳು ತಮ್ಮ ಬೇಡಿಕೆಗಳಿಗೋಸ್ಕರ ಚಳುವಳಿ ಮಾಡುವುದು ಸೂಕ್ತವಲ್ಲ. ಇದಕ್ಕೆಲ್ಲ ಸರ್ಕಾರ ಅವಕಾಶವನ್ನು ಕೊಡದೇ genuine problems ಏನಿದೆ ಅದನ್ನು ಕೂಡಲೇ ಬಗೆಹರಿಸಬೇಕು. ಮತ್ತೆ ಅದಕ್ಕೋಸ್ಕರ ತಕ್ಷಣ ಒಂದು ಮೀಟಿಂಗ್ ಕರೆದು ಮಾಡಬೇಕು. ಜನರಿಗೆ ಮತ್ತು ರೋಗಿಗಳಿಗೆ ತೊಂದರೆ ಆಗದ ರೀತಿಯಲ್ಲಿ ನೀವು ಕ್ರಮ ತೆಗೆದುಕೊಳ್ಳಬೇಕು. ಹಾಗೆಯೇ CET ನಲ್ಲಿ ಖಾಸಗಿ ಕ್ಷೇತ್ರದಲ್ಲಿ ಅಡ್ಮಿಷನ್ ಆಗುವವರಿಗೆ ಸರ್ಕಾರ fee ಯನ್ನು ತುಂಬಿಕೊಡಬೇಕೆಂದು ನಾನು ಅವರಲ್ಲಿ ಒತ್ತಾಯ ಮಾಡುತ್ತೇನೆ. Doctors and bed ratio, nurses and bed ratio ಅನ್ನು ತಾವು ಇನ್ನೊಂದು ಸಾರಿ ನೋಡಿ. ನಿಮ್ಮ ಪ್ರಕಾರ ಇದೆ ಎಂದು ನನಗೆ ಅನಿಸುವುದಿಲ್ಲ. ಯಾವ ಖಾಸಗಿ ವೈದ್ಯಕೀಯ ಆಸ್ಪತ್ರೆ ಕೂಡ without clinical facilities from Government cannot run safely. The students will not learn properly. ಏಕೆಂದರೆ, ಸರ್ಕಾರಿ ಆಸ್ಪತ್ರೆಗೆ ಆರ್ಥಿಕ ಸಂಕಷ್ಟದಲ್ಲಿರುವ Patientಗಳು ಅಲ್ಲಿಗೆ ಹೋಗುವುದರಿಂದ ಅಧ್ಯಯನ ಮಾಡುವುದಕ್ಕೆ ಉತ್ತಮವಾದಂಥ ಕೇಸ್‌ಗಳು ಅಲ್ಲಿ ಸಿಗುತ್ತವೆ. ಆದರೆ, ಖಾಸಗಿ ಕ್ಷೇತ್ರದಲ್ಲಿ super specialization ಮಾಡಿ ಅಲ್ಲಿಗೆ ಹೋಗತಕ್ಕಂಥ ರೋಗಿಗಳಿಂದ ಇವರ ಮಾಹಿತಿ history ಯನ್ನು ಮತ್ತು ಅವರ ಸಮಸ್ಯೆಗಳನ್ನು ತಿಳಿದುಕೊಂಡು ಅಧ್ಯಯನವನ್ನು ತುಂಬಾ ಬಲಿಷ್ಠವಾಗಿ ಮಾಡಲಿಕ್ಕೆ ಆಗುವುದಿಲ್ಲ. ಆದ್ದರಿಂದ clinical facilities from Government Hospital is a must. ಆದರೆ ಇವರು ಕ್ಲಿನಿಕಲ್ ಸೈಡ್‌ನವರು ನಾನ್ ಕ್ಲಿನಿಕಲ್ ಸೈಡ್‌ಗೆ ಹೋದರೆ ಅಲ್ಲಿಯೂ ಕೂಡ ಫಿಸಿಷಿಯನ್ ಇರುತ್ತಾರೆ, ಸರ್ಜನ್ ಇರುತ್ತಾರೆ. They should not over power. ಅವರು Second citizen ಆಗಬಾರದು. ಅದನ್ನು ಕೂಡ ನೀವು ಗಮನದಲ್ಲಿಟ್ಟುಕೊಳ್ಳಬೇಕು.

These are all the burning issues within the medical sector and also medical education sector. ಇದನ್ನೆಲ್ಲಾ ನೀವು ಸರಿದೂಗಿಸಬೇಕೆಂದು ಹೇಳುತ್ತೇನೆ. ನಾನು ಪ್ರಶ್ನೋತ್ತರದಲ್ಲಿ ಹೆಚ್ಚಿಗೆ ಮಾತನಾಡಿದ್ದಕ್ಕೆ sorry ಕೇಳುತ್ತಿದ್ದೇನೆ. ಹೇಳಲೇಬೇಕಾದ್ದನ್ನು ಹೇಳಿದ್ದೇನೆ. ಮಾನ್ಯ ಅಧ್ಯಕ್ಷರೆ, ಸರ್ಕಾರ ಇದನ್ನೆಲ್ಲಾ ಸೀರಿಯಸ್ಸಾಗಿ ಗಮನದಲ್ಲಿಟ್ಟುಕೊಂಡು ತಕ್ಷಣ ಮಿಟಿಂಗ್ ಕರೆದು Difference between the medical sector and the health sector sort out ಮಾಡಬೇಕು.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, MCI norms ಪ್ರಕಾರ ಎಲ್ಲಾ ಚೆನ್ನಾಗಿ ನಡೆಯುತ್ತಿದೆ ಎಂದು ಉತ್ತರವನ್ನು ಬಹಳ ಚೆನ್ನಾಗಿ ಕೊಡುತ್ತಿದ್ದಾರೆ. ಆದರೂ ಕೂಡ ಮೂರು ವರ್ಷದ ಮಗುವಿಗೆ ಅನಸ್ಥೇಷಿಯಾ ಕೊಟ್ಟು ಸತ್ತು ಹೋಗಿದೆ. ಇದು ಏಕೆ ಆಗುತ್ತಿದೆ, ಎಲ್ಲಾ MCI norms ಪ್ರಕಾರ ನಡೆಯುತ್ತಿದೆಯಾ? ಇದು ಅಂತೂ ನಡೆಯುತ್ತಲೇ ಇದೆ.

ಶ್ರೀ ಎಸ್. ಎ. ರಾಮದಾಸ್ :– ಪ್ರಮುಖವಾದ ಎರಡು ಮೂರು ವಿಚಾರಗಳನ್ನು ಗಮನಕ್ಕೆ ತಂದಿದ್ದೀರಿ. ಆ ದೃಷ್ಟಿಯಿಂದ ನಮ್ಮ ಕಾಲೇಜುಗಳಲ್ಲಿ ಇರಬೇಕಾದಂಥ MRI deformity ಇದೆ ಎಂದು ಇತ್ತು. ಅದನ್ನು ಹಾಕುವುದಕ್ಕೆ ಎಲ್ಲಾ ಆಸ್ಪತ್ರೆಗಳಲ್ಲಿ ನಾವು ಕೊಡುವಂತಹ ಪ್ರಾವಿಷನ್ ಮಾಡಿರುತ್ತೇವೆ. ಇದಲ್ಲದೇ ನಮಗೆ ಇರುವಂಥ ನರ್ಸ್ ಮತ್ತು ಬೆಡ್‌ಗಳಿಗೆ PG ಮತ್ತು UG ಸ್ಟ್ರೆಂತ್‌ಗಳ ಆಧಾರದ ಮೇಲೆ 1810 ಪ್ಯಾರಾ ಮೆಡಿಕಲ್ ಮತ್ತು ನರ್ಸ್‌ಗಳ ಅವಶ್ಯಕತೆ ಇತ್ತು. ಅದಕ್ಕೆ ಈಗಾಗಲೇ ಮಂಜೂರಾತಿ ತೆಗೆದುಕೊಂಡು ನೇಮಕಾತಿ ಪ್ರಾರಂಭ ಮಾಡಿದ್ದೇವೆ. ಅದರಲ್ಲಿ ತಾವು ಹೇಳಿದ ಹಾಗೆ ರೋಸ್ಟರ್ ಎಲ್ಲವನ್ನೂ ಮಾಡಿದ್ದೇವೆ. ಇದೇ ತಿಂಗಳ 10ನೇ ತಾರೀಖು ಕರ್ನಾಟಕ Examination Authority ನಲ್ಲಿ Examination conduct ಮಾಡುವುದು ಕೂಡ ಆಗುತ್ತಿದೆ. ಅಲ್ಲಿಗೆ ಸಂಪೂರ್ಣವಾಗಿ ಸ್ಟಾಫ್‌ನ್ನು ಫುಲ್‌ಫಿಲ್ ಮಾಡುವಂಥದ್ದು ಆಗುತ್ತದೆ. ಎರಡನೆಯ ವಿಷಯವನ್ನು ತಾವು ಹೇಳಿದಿರಿ. ಇದಕ್ಕೆ ಸಂಬಂಧಪಟ್ಟಂತೆ ಆಗಾಗ ಅಲ್ಲಿಂದ ವರದಿಗಳು ಏನೇನು ಬರುತ್ತಿದೆ? ಅದರ ಜೊತೆಯಲ್ಲಿಯೇ ವಿಶ್ವವಿದ್ಯಾಲಯ ಮತ್ತು One Man Committee ಯನ್ನು ವೆಂಕಟರಾಮಯ್ಯನವರ ನೇತೃತ್ವದಲ್ಲಿ

ಮಾಡಿರುತ್ತೇವೆ. ಅವರೂ ಕೂಡ ಆ ಕಾಲೇಜುಗಳಿಗೆ ಭೇಟಿ ಕೊಡುವಂಥ ಸಂದರ್ಭದಲ್ಲಿ ಇವೆಲ್ಲವನ್ನೂ Observe ಮಾಡಿ ನಮಗೆ ವರದಿಗಳನ್ನು ಕೊಡುವಂಥದ್ದನ್ನು ಮಾಡಿದ್ದಾರೆ. ಅದಕ್ಕೂ ಕೂಡ ಅಲ್ಲಿ ನಾವು ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಮಾನ್ಯ ಆರ್.ಅಶೋಕ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಆಗಿದೆ. ಈಗ ಇರುವ 10 ಮೆಡಿಕಲ್ ಕಾಲೇಜುಗಳು ಏನಿವೆ ಅಲ್ಲಿರುವಂಥ ಆಸ್ಪತ್ರೆಗಳ ಮ್ಯಾನೇಜ್‌ಮೆಂಟ್‌ನ್ನು ಆರೋಗ್ಯ ಇಲಾಖೆಗೆ ಬಿಟ್ಟು ಕೊಡಿ, ಅಲ್ಲಿ ಪ್ರಮೋಷನ್ ಪಾಲಿಸಿ ಇಲ್ಲ ಎನ್ನುವಂಥ ವಿಚಾರವನ್ನು ಹೇಳಿದ್ದೀರಿ. ಆ ಸಮಿತಿಯಲ್ಲಿ ಏನೇನು ಆಗಿದೆ ಎನ್ನುವಂಥದ್ದನ್ನು ಹೇಳುತ್ತೇವೆ. ಕೇಂದ್ರ ಸರ್ಕಾರದ ವೈದ್ಯಕೀಯ ಮಂತ್ರಿಗಳು ಕೆಲವು ಹೊಸ ಹೊಸ ನಾರ್ಮ್ಸ್‌ಗಳನ್ನು ಮಾಡಿ ಕೊಟ್ಟಿದ್ದಾರೆ. ಅದನ್ನೂ ಕೂಡ ಸಮಿತಿಯವರ ಮುಂದೆ ಇಡುತ್ತಿದ್ದೇವೆ. ಅದರ ಪ್ರಕಾರ ತಕ್ಷಣ ನಿರ್ಣಯ ಕೈಗೊಳ್ಳುವಂಥ ಕೆಲಸ ಆಗುತ್ತದೆ.

ಡಾ : ಹೆಚ್. ಸಿ. ಮಹದೇವಪ್ಪ :– ಮಾನ್ಯ ಅಧ್ಯಕ್ಷರೆ, ಆಸ್ಪತ್ರೆಗಳಲ್ಲಿ ಮಹಿಳಾ ಸಿಬ್ಬಂದಿಗಳಿಗೆ ರೆಸ್ಟ್‌ರೂಂ ಮತ್ತು Toilet ಗಳನ್ನು ಪ್ರತ್ಯೇಕವಾಗಿ ಕೊಡಿ. ಕಾಮನ್ ಆಗಿ ಇರುವುದರಿಂದ ಅವರಿಗೆ ಮುಜುಗರ ಆಗುತ್ತದೆ. ಈ ವಿಷಯ ನನ್ನ ಗಮನಕ್ಕೆ ಬಂದಿರುವುದರಿಂದ ಆ ಕಾರಣಕ್ಕಾಗಿ ತಮ್ಮ ಗಮನಕ್ಕೆ ತಂದಿರುತ್ತೇನೆ. ಪ್ರತ್ಯೇಕವಾಗಿ rest room for women Doctors and also paramedical women staff ಗೆ ಕೊಡಿ.

ಅಧ್ಯಕ್ಷರು :– ಆಯಿತು.

BPL ಕಾರ್ಡ್ ಹಂಚಿಕೆಯಲ್ಲಿ ಆಗಿರುವ ವ್ಯತ್ಯಾಸಗಳು

17 : (190)

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಭಾಲ್ಕಿ ತಾಲ್ಲೂಕಿನಲ್ಲಿ ಬಹಳಷ್ಟು ಬಡವರಿಗೆ BPL ಕಾರ್ಡ್ ಹಂಚಿಕೆಯಾಗದೇ ಹಾಗೂ ಕೆಲವರಿಗೆ APL ಕಾರ್ಡ್‌ಹಂಚಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;